ದಿನಾಂಕಃ 06-04-2021.

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಪಿ.ಡಿ.ಟಿ.ವಕೀಲರಿಂದಃ**

ಗೋವಿಂದಪ್ಪನವರ ತಂದೆ ವೆಂಕಟಪ್ಪನವರು ಮೂರು ಜನ ಅಣ್ಣ-ತಮ್ಮಂದಿರುಗಳು, ಅವರ ಹೆಸರುಗಳು ನನಗೆ ಗೊತ್ತಿಲ್ಲ. ಆ ಒಟ್ಟು ಕುಟುಂಬಕ್ಕೆ ಸರ್ವೇ ನಂ.166/3 ಮತ್ತು 159/3 ಇವುಗಳನ್ನು ಬಿಟ್ಟು ಮೂರು ಮನೆಗಳಿವೆ. ಈ ದಾವೆಯನ್ನು ಸರ್ವೇ ನಂ.166/3 ವಿಷಯವಾಗಿ ಹೂಡಿದ್ದಾರೆ. ಸರ್ವೇ ನಂ. 159/5 ಅವರ ಒಟ್ಟು ಕುಟುಂಬದಲ್ಲಿಯೇ ಇದೆ ಎಂದರೆ ಸರಿ. ಸರ್ವೇ ನಂ.166/3 ಮತ್ತು ಸರ್ವೇ ನಂ. 159/5 ಈ ಎರಡೂ ಸರ್ವೇ ನಂ.ಗಳನ್ನು ವೆಂಕಟಪ್ಪನವರು ಮತ್ತು ಅವರ ಅಣ್ಣ-ತಮ್ಮಂದಿರವರು ವಿಭಾಗ ಮಾಡಿಕೊಂಡಿದ್ದಾರೆ. ಆ ಬಗೆಗಿನ ಪತ್ರ ವಗೈರೆ ಬಗ್ಗೆ ನನಗೆ ಗೊತ್ತಿಲ್ಲ. ಸುಮಾರು 40-45 ವರ್ಷಗಳ ಹಿಂದೆ ಭಾಗ ಮಾಡಿಕೊಂಡಿದ್ದಾರೆ. ಅವರು ಪಾಲು ವಿಭಾಗ ಮಾಡಿಕೊಂಡಾಗ ನಾನು ಹಾಜರಿರಲಿಲ್ಲ. ಪಾಲು ವಿಭಾಗದ ಪ್ರಕಾರ ಅವರ ಹಿಸ್ಸೆಗೆ ಖಾತೆ ಬದಲಾವಣೆಯಾಗಿಲ್ಲ ಇನ್ನೂ ಜಂಟೀಯಾಗಿಯೇ ಇದೆ ಎನ್ನುತ್ತಾರೆ. ಅವರ ಹಿಸ್ಸೆಗಳಿಗೆ ಸಂಬಂಧಿಸಿದಂತೆ ದುರಸ್ತು, ಪೋಡುಗಳಾಗಿಲ್ಲ. ಮನೆಗಳು ಹಂಚಿಕೆಯಾಗಿವೆ. ಮನೆಗಳ ಖಾತೆಗಳು ಅವರುಗಳ ಹೆಸರಿನಲ್ಲಿ ಪ್ರತ್ಯೇಕವಾಗಿ ನೋಂದಣಿಯಾಗಿದೆ. ನಾನು 40-45 ವರ್ಷಗಳ ಹಿಂದೆ ವಾದಿಗಳು ವಿಭಾಗವಾಗಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರ್‌ಗೊಳಿಸಿ ಪ್ರಿಂಟ್ ತೆಗೆಯಲಾಯಿತು.)**

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.